ಮೂಲ ದಾವಾ ಸಂಖ್ಯೆ 8 /2016 ಪಿ ಡಬ್ಲ್ಯೂ 1 ಕೋಬಜ್ಜಿಪ್ರಕಾಶ್ ಬಿನ್ ಸಿದ್ದಪ್ಪ

(ದಿನಾಂಕ 07-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಕೆ ಎಂ ಜಿ ವಕೀಲರಿಂದಃ-

ಕೋಬಜ್ಜಿ ತೋಟಪ್ಪನವರಿಗೆ ಇಬ್ಬರು ಮಕ್ಕಳು. ಕೋಬಜ್ಜಿ ತೋಟಪ್ಪನವರಿಗೆ ಬಸಮ್ಮ ಎಂಬ ಮಗಳಿದ್ದರು ಎಂದರೆ ಸರಿ. ಬಸಮ್ಮನಿಗೆ ಒಬ್ಬ ಮಗ ಅವರೆಂದರೆ ಬುಳ್ಳಿ ಹಾಲಪ್ಪ. ಬಸಮ್ಮನಿಗೆ ಒಟ್ಟು 7 ಮಕ್ಕಳು ಎಂದರೆ ಸರಿಯಲ್ಲ ಪ್ರತಿವಾದಿಯು ಬಸಮ್ಮನ ಮಗಳು ಎಂದರೆ ಸರಿಯಲ್ಲ. ವಾದಪತ್ರದ ಎ ಷೆಡ್ಯೂಲಿನಲ್ಲಿ ತೋರಿಸಿರುವಂತಹ ವಂಶವೃಕ್ಷ ತಪ್ಪಾಗಿರುತ್ತದೆಂದರೆ ಸರಿಯಲ್ಲ.

ಕೋಬಜ್ಜಿ ಭರಮಪ್ಪ ನನ್ನ ದೊಡ್ಡಪ್ಪ ಮತ್ತು ಕೋಬಜ್ಜಿ ಸಿದ್ದಪ್ಪ ನನ್ನ ತಂದೆ. ಸದರಿ ಇಬ್ಬರ ನಡುವೆ ಪಾಲುವಿಭಾಗವಾಗಿರುತ್ತದೆಂದರೆ ನನಗೆ ಗೊತ್ತಿರುವುದಿಲ್ಲ. ಕೋಬಜ್ಜಿ ಈರಮ್ಮ ನನ್ನ ದೊಡ್ಡಮ್ಮಳಾಗಿದ್ದು ಆಕೆಗೆ ಮಕ್ಕಳಿಲ್ಲದಿರುವ ಕಾರಣ ಆಕೆಯನ್ನು ನಾವು ಕರೆದುಕೊಂಡು ಹೋಗಿ ಸಾಕಿರುತ್ತೇವೆ. ಕಾರಣ ಸದರಿ ಆಸ್ತಿಯು ನಮಗೆ ಸಂಬಂಧಪಟ್ಟಿರುವುದಾಗಿ ದಾವೆ ದಾಖಲುಪಡಿಸಿರುತ್ತೇವೆ. ಕೋಬಜ್ಜಿ ತೋಟಪ್ಪನಿಗೆ ಒಟ್ಟು 6 ಎಕರೆ 86 ಸೆಂಟ್ಸ ಜಮೀನು ಇತ್ತು ಸರ್ವೆ ನಂ. ಬಿ-29. ಸದರಿ ಆಸ್ತಿಯಲ್ಲಿ ನನ್ನ ತಂದೆಗೆ ಎಷ್ಟು ಎಕರೆ ಜಮೀನು ಬಂದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ ಸರ್ವೆ ನಂ. 338-ಎ-2 ಒಟ್ಟು 6 ಎಕರೆ 86 ಸೆಂಟ್ಸ ಜಮೀನಾಗಿತ್ತು ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಸದರಿ 6 ಎಕರೆ 86 ಸೆಂಟ್ಸ ಜಮೀನಿನಲ್ಲಿ 3 ಎಕರೆ 59 ಸೆಂಟ್ಸ ಜಮೀನು ನಮಗೆ ಬಂದಿರುವುದಾಗಿ ಬರೆಸಿರುತ್ತೇನೆಂದರೆ ಸರಿಯಲ್ಲ. ಉಳಿದ 3 ಎಕರೆ 59 ಸೆಂಟ್ಸ ಜಮೀನು ನನ್ನ ದೊಡ್ಡಪ್ಪನ

ಪಾಲಿಗೆ ಹೋಗಿರುವುದಾಗಿ ನನ್ನ ಸಾಕ್ಷ್ಯಪ್ರಮಾಣಪತ್ರದಲ್ಲಿ ಬರೆಸಿರುತ್ತೇನೆಂದರೆ ಸರಿ ನಮ್ಮ ಪಾಲಿಗೆ ಬಂದಂತಹ ಸ್ವತ್ತನ್ನು ನಾವು ಮಾರಾಟ ಮಾಡಿರುತ್ತೇವೆಂದರೆ ನನಗೆ ಗೊತ್ತಿರುವುದಿಲ್ಲ.

ಪ್ರತಿವಾದಿ ಮಲ್ಲಮ್ಮ ಸಕ್ರಿಹಳ್ಳಿಯಲ್ಲಿ ವಾಸ ಮಾಡುತ್ತಾರೆ ಕೋಣಬಜ್ಜಿ ಈರಮ್ಮ ಸಕ್ರಿಹಳ್ಳಿಯಲ್ಲಿ ಮೃತಪಟ್ಟಿರುತ್ತಾರೆ ಪ್ರತಿವಾದಿಯು ಕೋಣಬಜ್ಜಿ ಈರಮ್ಮಳ ನಾದಿನಿ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ಕೋಣಬಜ್ಜಿ ಈರಮ್ಮ ಸಾಯುವತನಕ ಆಕೆಯ ಯೋಗಕ್ಷೇಮವನ್ನು ನೋಡಿಕೊಂಡಿರುತ್ತಾರೆಂದರೆ ಸರಿಯಲ್ಲ.

2016 ನೇ ಸಾಲಿನಲ್ಲಿ ನಾವು ದಾವಾಸ್ತಿಯಲ್ಲಿ ಜಮೀನನ್ನು ಬೋರನ್ನು ಕೋರೆಸಲು ಸಾಲವನ್ನು ಕೇಳಲು ಹೋಗಿದ್ದೆವು. ಸಾಲದ ಅರ್ಜಿಯ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪಾಲುವಿಭಾಗದ ಪ್ರಕಾರ ಕೋಣಬಜ್ಜಿ ಭರಮಪ್ಪನ ಹೆಸರಿನಲ್ಲಿ ಪಹಣಿ ಹಾಗೂ ಮ್ಯುಟೇಶನ್ ದಾಖಲೆಯಾಗಿತ್ತು ಎಂದರೆ ಸರಿ. ಕೋಣಬಜ್ಜಿ ಭರಮಪ್ಪನ ಮರಣಾನಂತರ ಕೋಣಬಜ್ಜಿ ಈರಮ್ಮಳ ಹೆಸರಿಗೆ ಪಹಣಿ ಹಾಗೂ ಮ್ಯುಟೇಶನ್ ಬದಲಾವಣೆಯಾಗಿತ್ತು ಎಂದರೆ ಸರಿ.

ನನಗೆ ಈಗ 56 ವರ್ಷ. 1980 ನೇ ಸಾಲಿನಲ್ಲಿ ಕೋಣಬಜ್ಜಿ ಈರಮ್ಮಳ ಹೆಸರಿಗೆ ಪಹಣಿ ಬದಲಾವಣೆಯಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ